KACM210008032021

O.S.152/2021
PW.1

**ದಿಃ 09-12-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿ ಪರ: ಶ್ರೀ. ಕೆ.ಎನ್.ಎಂ. ವಕೀಲರಿಂದಃ-</u>**

ನನ್ನ ಗಂಡನ ಹೆಸರು ಕೆ.ಸಿ.ಗಿರೀಶ್ ಆಗಿರುತ್ತದೆ. ನನ್ನ ಗಂಡ ಸುಮಾರು 35 ವರ್ಷದಿಂದ ಪ್ರೊಫೇಷನಲ್ ಕೋರಿಯರ್ ವ್ಯವಹಾರ ಮಾಡುತ್ತಿದ್ದಾರೆ. ಸದರಿ ವ್ಯವಹಾರವನ್ನು ನನ್ನ ಗಂಡ ಪಾಂಡುರಂಗ ಫೈನಾನ್ಸ್ ನಲ್ಲಿ ಇರುವ ಕೆ.ಜಿ.ಪ್ರಕಾಶ್ ರವರ ಬಳಿ ಬಾಡಿಗೆಗೆ ಮಳಿಗೆಯನ್ನು ತೆಗೆದುಕೊಂಡು ವ್ಯವಹಾರ ನಡೆಸುತ್ತಿರುತ್ತೇವೆ. ಸದರಿ ಮಳಿಗೆಯಲ್ಲೇ ನನ್ನ ಗಂಡ ಸುಮಾರು 30 ವರ್ಷಗಳಿಂದ ಪ್ರೊಫೇಷನಲ್ ಕೋರಿಯರ್ ವ್ಯವಹಾರ ಮಾಡುತ್ತಿದ್ದಾರೆ. ಆಗ ಸದರಿ ಮಳಿಗೆಗೆ 3000/- ಬಾಡಿಗೆ ನೀಡುತ್ತಿದ್ದೆವು. ಈಗ ಸದರಿ ಮಳಿಗೆಗೆ 4000/- ಬಾಡಿಗೆ ನೀಡುತ್ತಿದ್ದೇವೆ. ನಾವು ಬಾಡಿಗೆಗೆ ಪಡೆದಿರುವ ಮಳಿಗೆಯು ಇತರೆ ಮಳಿಗೆಗಳಿಗೆ ಅಂಟಿಕೊಂಡಿರುತ್ತದೆ ಎಂದರೆ ಸರಿ. ನಾವು ಬಾಡಿಗೆಗೆ ಪಡೆದಿರುವ ಮಳಿಗೆಯ ಕೆಳಗೆ 5 ಮಳಿಗೆಗಳಿರುತ್ತವೆ ಮತ್ತು ನಾವು ಬಾಡಿಗೆಗೆ ಇರುವ ಮಳಿಗೆಯ ಸಾಲಿನಲ್ಲಿ 5 ಮಳಿಗೆಗಳಿರುತ್ತವೆ ಎಂದರೆ ಸರಿ. ನಮ್ಮ ಮಳಿಗೆಯ ಸಾಲಿನಲ್ಲಿ ಇರುವ ಮಳಿಗೆಗಳಿಗೆ ಬೇರೆ ಬೇರೆ ಮಾಲೀಕರು ಇರುತ್ತಾರೆ ಎಂದರೆ ಸರಿ. ನಮಗೆ ಬಾಡಿಗೆಗೆ ನೀಡಿರುವ ಮಳಿಗೆ ಮಾಲೀಕರು ನಾವು ಸರಿಯಾಗಿ ಬಾಡಿಗೆ ಪಾವತಿಸುತ್ತಿಲ್ಲ ಎಂದು ನನ್ನ ಗಂಡನ ಮೇಲೆ ಕಡೂರು ನ್ಯಾಯಾಲಯದಲ್ಲಿ ದಾವೆ ಹಾಕಿದ್ದರು ಎಂದರೆ ಸರಿ. ಸದರಿ ದಾವೆಯನ್ನು ನಾವು ರಾಜಿ ಮಾಡಿಕೊಂಡಿರುತ್ತೇವೆ ಎಂದರೆ ಸರಿ. ನನ್ನ ಗಂಡ ಬದುಕಿರುವ ವರೆಗೂ ಸದರಿ ಪ್ರೊಫೇಷನಲ್ ಕೋರಿಯರ್ ವ್ಯವಹಾರದಿಂದ ಬರುವ ಆದಾಯವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯದ ಮೂಲ ಇರಲಿಲ್ಲ ಎಂದರೆ ಸರಿಯಲ್ಲ.

KACM210008032021

O.S.152/2021
PW.1

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

Sd/-

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು ಕಡೂರು.